ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿ/ಶೈಶಾ-04/NSQF-03//2016-17

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಕ್ರಾಸ್, ಮಲ್ಲೇಶ್ವರಂ,
ಬೆಂಗಳೂರು-560012
ದಿನಾಂಕ: 07.02.2017
13.02.17.

## ಸುತ್ತೋಲೆ

**ವಿಷಯ:** NSQF ಅಡಿಯಲ್ಲಿ ವೃತ್ತಿ ಶಿಕ್ಷಣ ವಿಷಯಗಳಿಗೆ ಪರೀಕ್ಷಾ ಸಂಕೇತ ನೀಡುವ ಬಗ್ಗೆ

**ಉಲ್ಲೇಖ:** 1) ಸರ್ಕಾರದ ಆದೇಶ ಸಂಖ್ಯೆ: ಇಡಿ 59ಎಂ ಸಿ ಡಿ 2016 ಬೆಂಗಳೂರು ದಿನಾಂಕ: 16.6.2016

2) ಈ ಕಛೇರಿ ಪತ್ರ ಸಂಖ್ಯೆ: ಪಪೂಶಿಇ/ಶೈಶಾ-04/ಸಭೆ ಸಂ:01/2012-13 ದಿನಾಂಕ: 07.09.2016 ಹಾಗೂ ಪಪೂಶಿಇ/ಶೈಶಾ-04/NVEQF-01/2016-17 ದಿನಾಂಕ: 03.08.2016

3) ರಾಜ್ಯ ಯೋಜನಾ ನಿರ್ದೇಶಕರ ಪತ್ರ ಸಂಖ್ಯೆ: ಆರ್.ಎನ್.ಎಸ್.ಕ್ಯೂ. ಎಫ್-02/2016-17 ದಿನಾಂಕ: 14.12.2016

***

ಉಲ್ಲೇಖ 1 ರ ಸರ್ಕಾರಿ ಆದೇಶದಂತೆ ರಾಜ್ಯದ ಆಯ್ದ 100 ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜುಗಳಲ್ಲಿ 9 ರಿಂದ 12 ನೇ ತರಗತಿಯ ವಿದ್ಯಾರ್ಥಿಗಳಿಗೆ ಎನ್‌ಎಸ್‌ಕ್ಯೂಎಫ್ ಯೋಜನೆಯಡಿ ವೃತ್ತಿ ಶಿಕ್ಷಣದ ಐದು ವಿಷಯಗಳನ್ನು (ಮಾಹಿತಿ ತಂತ್ರಜ್ಞಾನ, ರೀಟೇಲ್, ಆಟೋಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಮತ್ತು ವೆಲ್‌ನೆಸ್) ಅನುಷ್ಠಾನಗೊಳಿಸಲಾಗಿದೆ. 2016-17 ನೇ ಸಾಲಿನಿಂದ ಪ್ರಥಮ ಪಿಯುಸಿಗೆ ಹಾಗೂ 2017-18 ನೇ ಸಾಲಿನಿಂದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗೆ ಸದರಿ ವಿಷಯಗಳನ್ನು ಅಧ್ಯಯನ ಮಾಡಲು ಆದೇಶಿಸಲಾಗಿದೆ.

ಉಲ್ಲೇಖ 2 ರ ಈ ಇಲಾಖಾ ಸುತ್ತೋಲೆಯಲ್ಲಿ ತಿಳಿಸಿರುವಂತೆ ವೃತ್ತಿ ಶಿಕ್ಷಣ ವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳಿಗೆ ಭಾಗ 1ರ ಭಾಷಾ ವಿಷಯಗಳಲ್ಲಿ ವಿದ್ಯಾರ್ಥಿಯ ಇಚ್ಚೆಯ ಪ್ರಕಾರ ಯಾವುದಾದರೊಂದು ಭಾಷೆಗೆ ವಿನಾಯ್ತಿ ನೀಡಲಾಗಿದೆ. ಅಲ್ಲದೇ ಪ್ರಾಯೋಗಿಕ, ತಾತ್ವಿಕ ಮತ್ತು ಆಂತರಿಕ ಪರೀಕ್ಷೆಗಳನ್ನು ನಡೆಸುವ ಬಗ್ಗೆ ವಿವರಿಸಲಾಗಿದೆ. ಅದೇ ರೀತಿ ಸದರಿ ಕಾಲೇಜುಗಳಲ್ಲಿ ಎನ್‌ಎಸ್‌ಕ್ಯೂಎಫ್ ಯೋಜನೆಯನ್ನು ಅನುಷ್ಠಾನ ಮಾಡುವ ಬಗ್ಗೆ ಹಾಗೂ ತರಬೇತಿದಾರರು ತರಗತಿ ನಡೆಸಲು ಅನುಕೂಲ ಮಾಡಿಕೊಡುವ ಬಗ್ಗೆ ಸೂಚಿಸಲಾಗಿದೆ.

ಮುಂದುವರೆದು ಸದರಿ 05 ಸೆಕ್ಟರ್ (ವಿಷಯ) ಗಳಿಗೆ ಪರೀಕ್ಷಾ ಸಂಕೇತ ನೀಡುವ ಬಗ್ಗೆ ಉಲ್ಲೇಖ 3 ರಲ್ಲಿ ತಿಳಿಸಲಾಗಿದ್ದು, ಅದರಂತೆ ಈ ಕೆಳಕಂಡಂತೆ 05 ವೃತ್ತಿ ಶಿಕ್ಷಣ ವಿಷಯಗಳಿಗೆ ಪದವಿ ಪೂರ್ವ ಶಿಕ್ಷಣ ಇಲಾಖೆಯ ಇತರೆ ವಿಷಯಗಳಿಗೆ ನೀಡಿದಂತೆ ವಿಷಯ ಸಂಕೇತಗಳನ್ನು ನೀಡಿ ಆದೇಶಿಸಲಾಗಿದೆ.

| ಕ್ರಸಂ | ವೃತ್ತಿ ಶಿಕ್ಷಣ ವಿಷಯ | ಸಂಕೇತ ಸಂಖ್ಯೆ |
|---|---|---|
| 01 | ಮಾಹಿತಿ ತಂತ್ರಜ್ಞಾನ | 61 |
| 02 | ರೀಟೇಲ್ | 62 |
| 03 | ಆಟೋಮೊಬೈಲ್ | 63 |
| 04 | ಹೆಲ್ತ್‌ಕೇರ್ | 64 |
| 05 | ಬ್ಯೂಟಿ ಮತ್ತು ವೆಲ್‌ನೆಸ್ | 65 |

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಯನ್ನು

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿ ಕಟ್ಟಡ, ಬೆಂಗಳೂರು- ಮಾಹಿತಿಗಾಗಿ ಸಲ್ಲಿಸಿದೆ.
2. ಜಂಟಿ ನಿರ್ದೇಶಕರು (ಪರೀಕ್ಷೆ), (ಮಾ&ಅ), (ಆಡಳಿತ), (ಶೈಕ್ಷಣಿಕ) – ಪ.ಪೂ.ಶಿ.ಇ – ಮಾಹಿತಿಗಾಗಿ
3. ರಾಜ್ಯದ ಎಲ್ಲಾ ಪ.ಪೂ.ಶಿ.ಇ – ಜಿಲ್ಲಾ ಉಪನಿರ್ದೇಶಕರಿಗೆ – ಮಾಹಿತಿಗಾಗಿ
4. ಸಂಬಂಧಿಸಿದ ಸರ್ಕಾರಿ ಪ.ಪೂ.ಕಾಲೇಜುಗಳ ಪ್ರಾಚಾರ್ಯರಿಗೆ- ಮುಂದಿನ ಕ್ರಮಕ್ಕಾಗಿ
5. ಗಣಕ ಯಂತ್ರ ಶಾಖೆಗೆ- ಅವಗಾಹನೆಗಾಗಿ
6. ಇ-ಗವರ್ನೆನ್ಸ್ ಶಾಖೆಗೆ- ಇಲಾಖೆಯ ಜಾಲತಾಣದಲ್ಲಿ ಅಳವಡಿಸಲು
7. ಕಛೇರಿ ಪ್ರತಿ